ಸೇಡಂ ತಾಲ್ಲೂಕಿನ ಕೋಲಕುಂದ ಗ್ರಾಮಕ್ಕೆ ಕುಡಿಯುವ ನೀರಿನ ವ್ಯವಸ್ಥೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1074(1519)

ಸದಸ್ಯರ ಹೆಸರು: ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ(ಸೇಡಂ)

ಉತ್ತರಿಸುವ ಸಚಿವರು: ಶ್ರೀ ಎಂ.ವೈ.ಘೋರ್ಪಡೆ(ಗ್ರಾಮೀಣಾಭಿವೃದ್ಧಿ ಸಚಿವರು)

ಪ್ರಶ್ನೆ

ಅ. ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಸುಮಾರು 5-6 ಸಾವಿರ ಜನಸಂಖ್ಯೆಯುಳ್ಳ ಕೋಲಕುಂದ ಗ್ರಾಮಕ್ಕೆ ಕುಡಿಯುವ ನೀರಿನ ಸರಬರಾಜಿಗಾಗಿ ಸುಮಾರು 6-7 ವರ್ಷ ಮೊದಲು ನಿರ್ಮಾಣವಾಗಿರುವ ಟ್ಯಾಂಕ್‌ನಿಂದ ನೀರು ಸರಬರಾಜು ಮಾಡದೇ ಇರುವುದು ನಿಜವೇ?

ಆ. ಮಾಡದಿದ್ದಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಂಡು ಲಕ್ಷಾನುಗಟ್ಟಲೆ ಹಣ ಖರ್ಚು ಮಾಡುವ ಅವಶ್ಯಕತೆಯಿತ್ತೆ?

ಇ. ಇದಕ್ಕೆ ಕಾರಣರಾದವರ ಮೇಲೆ ಕೈಗೊಂಡಿರುವ ಕ್ರಮವೇನು? ಈಗಲಾದರೂ ಈ ಟ್ಯಾಂಕಿನಿಂದ ಕುಡಿಯುವ ನೀರು ಸರಬರಾಜು ಮಾಡಿ ನಾಗರಿಕರಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೆ? ಹಾಗಿದ್ದಲ್ಲಿ, ಯಾವಾಗ ಕೈಗೊಳ್ಳಲಾಗುವುದು?

ಉತ್ತರ

ಅ. ಹೌದು.

ಆ. ಜನಸಂಖ್ಯೆಗನುಗುಣವಾಗಿ, ಗ್ರಾಮಕ್ಕೆ ಇನ್ನೊಂದು ಟ್ಯಾಂಕಿನ ಅವಶ್ಯಕತೆಯಿದ್ದುದರಿಂದ, 1992-93ನೇ ಸಾಲಿನಲ್ಲಿ 1 ಲಕ್ಷ ಲೀಟರ್ ಸಾಮರ್ಥ್ಯದ ಟ್ಯಾಂಕನ್ನು ನಿರ್ಮಿಸಲಾಗಿದೆ. ಆದರೆ, ಜಲಮೂಲದ ಇಳುವರಿ ಕಡಿಮೆಯಾಗಿ ಸದರಿ ಟ್ಯಾಂಕ್‌ನಿಂದ ನೀರು ಸರಬರಾಜು ಮಾಡುವಲ್ಲಿ ವ್ಯತ್ಯಯವಾಗಿದೆ. ಗ್ರಾಮದಲ್ಲಿರುವ ಎರಡು ಟ್ಯಾಂಕ್‌ಗಳ ಪೈಕಿ, ಗ್ರಾಮಕ್ಕೆ ಸಮೀಪದ ಟ್ಯಾಂಕಿನಿಂದ ಮತ್ತು ಹಾಲಿಯಿರುವ ಕಿರುನೀರು ಸರಬರಾಜು ಯೋಜನೆಯಿಂದ ನೀರು ಸರಬರಾಜಾಗುತ್ತಿದೆ.

ಇ. ಜಲಮೂಲದ ಇಳುವರಿ ಕಡಿಮೆಯಾದ ಕಾರಣ ಟ್ಯಾಂಕಿನಿಂದ ನೀರು ಸರಬರಾಜು ಮಾಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. ವಿಶ್ವಬ್ಯಾಂಕ್ ನೆರವಿನ 2ನೇ ಹಂತದ

ಯೋಜನೆಯಡಿ ಕೋಲಕುಂದ ಗ್ರಾಮದಲ್ಲಿ ತೆಗೆದುಕೊಂಡ ನೀರು ಸರಬರಾಜು ಯೋಜನೆಯ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದ್ದು 1992-93ನೇ ಸಾಲಿನಲ್ಲಿ ನಿರ್ಮಿಸಲಾದ ಟ್ಯಾಂಕಿನಿಂದ ಸಧ್ಯದಲ್ಲೇ ಗ್ರಾಮಕ್ಕೆ ಸಮರ್ಪಕವಾಗಿ ನೀರಿನ ಪೂರೈಕೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಪಿರಿಯಾಪಟ್ಟಣ ಸಾರ್ವಜನಿಕ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 1075(151)

ಪ್ರಶ್ನೆ ಕೇಳಿದ ಸದಸ್ಯರು: ಶ್ರೀ ಬಸವರಾಜು ಹೆಚ್.ಪಿ(ಪಿರಿಯಾಪಟ್ಟಣ)

ಉತ್ತರಿಸಬೇಕಾದ ಸಚಿವರು: ಡಾ॥ ಎ.ಬಿ.ಮಾಲಕರೆಡ್ಡಿ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಪ್ರಶ್ನೆ

ಅ) ಪಿರಿಯಾಪಟ್ಟಣ ನಗರದಲ್ಲಿರುವ ಸಾರ್ವಜನಿಕ ಆಸ್ಪತ್ರೆಯು ಎಷ್ಟು ಹಾಸಿಗೆ ಒಳಗೊಂಡಿರುವ ಆಸ್ಪತ್ರೆಯಾಗಿದೆ?

ಆ) ಇತ್ತೀಚೆಗೆ ಈ ಆಸ್ಪತ್ರೆಗೆ ರೋಗಿಗಳ ದಾಖಲಾತಿ ಹೆಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ, ಎಷ್ಟು ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗುವುದು?

ಈ) ಪ್ರಸ್ತುತ ವರ್ಷದಲ್ಲೇ ಈ ಕಾರ್ಯ ಪ್ರಾರಂಭಿಸಲಾಗುವುದೇ?

ಉತ್ತರ

ಅ) ಪಿರಿಯಾಪಟ್ಟಣ ನಗರದಲ್ಲಿರುವ ಸಾರ್ವಜನಿಕ ಆಸ್ಪತ್ರೆಯು 30 ಹಾಸಿಗೆಯುಳ್ಳದ್ದಾಗಿದೆ.

ಆ) ಬಂದಿದೆ.

ಇ ಮತ್ತು ಈ) ಸದ್ಯಕ್ಕೆ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಸುವ ಪ್ರಸ್ತಾವನೆ ಇರುವುದಿಲ್ಲ.